ಶ್ರೀ ರೇವುನಾಯ್ಕ ಬೆಳಮಗಿ :— ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಸಿಟಿಗೆ ಗ್ರಾಮೀಣ ಹುಡುಗರು ಸೇರುತ್ತಿದ್ದಾರೆ. ಪದವಿ ಪೂರ್ವ ಕಾಲೇಜಿಗೂ ಹಾಸ್ಟೆಲ್ ಕೊಡಬೇಕು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ಮಾನ್ಯ ಅಧ್ಯಕ್ಷರೆ, ಪದವಿ ಪೂರ್ವ ಕಾಲೇಜಿನ ವಸತಿ ಬಗ್ಗೆ ಅವರು ಪ್ರಶ್ನೆ ಕೇಳಿಲ್ಲ. ಆದರೂ ಕೂಡ ನಾವು ಬಜೆಟ್‌ನಲ್ಲಿ ಈಗಾಗಲೇ ಮುಂದಿನ ಪದವಿ ಪೂರ್ವ ಕಾಲೇಜಿಗೆ ಇಟ್ಟಿಲ್ಲ. ಯೂನಿವರ್ಸಿಟಿ ಏನು ಇದೆ, ಅಲ್ಲಿ ಆರು ಪದವಿ ಪೂರ್ವ ಕಾಲೇಜನ್ನು ಪ್ರಾರಂಭ ಮಾಡಿದ್ದೇವೆ. ಮುಂದಿನ ಆಯವ್ಯಯದಲ್ಲಿ ನಿರ್ಮಾಣ ಮಾಡಿದರೆ ಖಂಡಿತವಾಗಿ ಅದರ ಬಗ್ಗೆ ಪರಿಶೀಲಿಸಿ ನಾನು ಸಹಾಯ ಮಾಡತಕ್ಕ ಕಾರ್ಯಕ್ರಮವನ್ನು ರೂಪಿಸುತ್ತೇವೆಂದು ಹೇಳಬಯಸುತ್ತೇವೆ.

ಗಿರಿಜನ ಉಪ ಯೋಜನೆಯಡಿ ಗೋಕಾಕ್ ತಾಲ್ಲೂಕಿಗೆ ಮಂಜೂರಾದ ಹಣ.

39(446) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಪಂಗಡಕ್ಕೆ ಸೇರಿದ ಗೋಕಾಕ್ ಕ್ಷೇತ್ರಕ್ಕೆ ಗಿರಿಜನ ಉಪ ಯೋಜನೆಗೆ ಬಿಡುಗಡೆಯಾದ ಹಣವೆಷ್ಟು?

ಆ) ಸದರಿ ಗಿರಿಜನ ಉಪಯೋಜನೆಯಲ್ಲಿ ಸಾಧಿಸಿದ ಪ್ರಗತಿ ಎಷ್ಟು?

ಇ) ಎಸ್.ಟಿ. ಮೀಸಲು ಕ್ಷೇತ್ರವಾದ ಗೋಕಾಕ್ ಕ್ಷೇತ್ರಕ್ಕೆ ಹೆಚ್ಚುವರಿ ಹಣ ನೀಡದಿರಲು ಕಾರಣವೇನು?

ಈ) ಗಿರಿಜನ ಉಪಯೋಜನೆಯಡಿ ಮಂಜೂರಾದ ಹಣದ ಬಳಕೆ ಸರಿಯಾಗಿ ಆಗಿದೆಯೇ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಗಿರಿಜನ ಉಪ ಯೋಜನೆಯಡಿ, ಗೋಕಾಕ್ ತಾಲ್ಲೂಕಿಗೆ 1997-98ನೇ ಸಾಲಿನಲ್ಲಿ ರಾಜ್ಯ ಯೋಜನೆಯಲ್ಲಿ ರೂ. 4.494 ಲಕ್ಷ ಮತ್ತು ವಿಶೇಷ ಕೇಂದ್ರೀಯ ನೆರವಿನಲ್ಲಿ ರೂ. 2.24 ಲಕ್ಷಗಳನ್ನು ಹಾಗೂ 98-99ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿ ರೂ. 1.015 ಲಕ್ಷ ಮತ್ತು ವಿಶೇಷ ಕೇಂದ್ರೀಯ ನೆರವಿನಡಿ ರೂ. 0.828 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಅ) 1997-98 ನೇ ಸಾಲಿನಲ್ಲಿ ರಾಜ್ಯ ಯೋಜನೆಯಲ್ಲಿ ರೂ. 1.484 ಲಕ್ಷ ಮತ್ತು ಕೇಂದ್ರೀಯ ನೆರವಿನಡಿ ರೂ. 2.174 ಲಕ್ಷಗಳು ಖರ್ಚಾಗಿದೆ. 98-99ನೇ ಸಾಲಿನಲ್ಲಿ ರಾಜ್ಯ ಯೋಜನೆಯಲ್ಲಿ ರೂ. 1.014ಲಕ್ಷ ಮತ್ತು ವಿಶೇಷ ಕೇಂದ್ರೀಯ ನೆರವಿನಡಿ ರೂ. 0.127 ಲಕ್ಷಗಳನ್ನು ಇದುವರೆಗೆ ವಿನಿಯೋಗಿಸಲಾಗಿದೆ.

ಇ) ಗಿರಿಜನ ಉಪ ಯೋಜನೆಯಡಿಯಲ್ಲಿ ತಾಲ್ಲೂಕುವಾರು ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಹಣ ನಿಗದಿಪಡಿಸಲಾಗುತ್ತಿದೆ.

ಈ) ಆಗಿದೆ.

ಶ್ರೀ ಚಂದ್ರಶೇಖರ ನಾಯಕ್:— ಮಾನ್ಯ ಸಭಾಧ್ಯಕ್ಷರೆ, ಗೋಕಾಕ್ ಕ್ಷೇತ್ರ, ಅದು ಪರಿಶಿಷ್ಟ ಪಂಗಡಕ್ಕೆ ಮೀಸಲಾದಂತಹ ಕ್ಷೇತ್ರ. ಇವರು ಮಾಡಿದಂತಹ ಸರ್ವೆ ಎಂದರೆ 1991ರಲ್ಲಿ ಎಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿದಂತಹ ಜನ ಇದ್ದಾರೆ ಎಂದು ಮಾಡಿದ್ದರು. 1992ರಲ್ಲಿ ಈ ಸಮನ್ವಯ ಪದ ಇರತಕ್ಕ ಎಲ್ಲಾ ಜಾತಿಗಳು ಅಂದರೆ ನಾಯಕ್ ಜಾತಿಗೆ ಸಂಬಂಧಪಟ್ಟಂತೆ ಎಲ್ಲಾ ಜಾತಿಗಳು ಅದರಲ್ಲಿ ಸೇರಲ್ಪಟ್ಟವು. ಈಗ ಅಲ್ಲಿ 74 ಸಾವಿರ ಜನಸಂಖ್ಯೆ ಇದೆ. ಆದರೂ 1998-99 ರಲ್ಲಿ ಕೊಟ್ಟಂತಹ ಹಣ 1 ಲಕ್ಷ 26 ಸಾವಿರ ರೂಪಾಯಿ. ಅಡಿಷನಲ್ ಆಗಿ ಕೊಡಬೇಕಾಗಿತ್ತು ಎಂಬ ಪ್ರಶ್ನೆಗೆ ಅದು ಅವಶ್ಯಕತೆ ಬೀಳುವುದಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡಬೇಕು.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:— ಮಾನ್ಯ ಅಧ್ಯಕ್ಷರೆ, ಗೋಕಾಕ್ ಕ್ಷೇತ್ರ ಪರಿಶಿಷ್ಟ ವರ್ಗಕ್ಕೆ ಸೇರಿರತಕ್ಕಂಥ ಒಂದು ದೃಷ್ಟಿ ಇಟ್ಟುಕೊಂಡು ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಈಗ ಒಂದು ಆಶ್ರಯ ಶಾಲೆ ಆ ವರ್ಗಕ್ಕೆ ಸೇರಬೇಕೆಂಬ ಬಗ್ಗೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇದು ಯೋಜನೆ ಮಾಡತಕ್ಕದ್ದು ಉಪ ಯೋಜನೆ ಜಿಲ್ಲಾಮಟ್ಟದಲ್ಲಿ ಜಿಲ್ಲಾ ವಲಯದಲ್ಲಿ ಒಂದು ಯೋಜನೆ ತಯಾರು ಮಾಡುತ್ತಾರೆ. ಆ ಯೋಜನೆಗೆ ಹಣ ಕೊಡತಕ್ಕದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಜನಸಂಖ್ಯೆ ಆಧಾರದ ಮೇಲೆ ಇಡೀ ರಾಜ್ಯದಲ್ಲಿ ಜಾರಿಗೊಳಿಸತಕ್ಕ ವಿಧಿ ಇದೆ. ಯೋಜನಾ ವೆಚ್ಚಕ್ಕೆ ಹೆಚ್ಚು ಬೇಕಾಗಿದ್ದರೆ ರಾಜ್ಯ ವಲಯದಿಂದ, ಕೇಂದ್ರ ವಲಯದಿಂದ ಕೊಡತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಚಂದ್ರಶೇಖರ್ ನಾಯಕ್ :— ಎಸ್.ಟಿ. ವಸತಿ ಶಾಲೆಯನ್ನು ಕೊಟ್ಟಿದ್ದಕ್ಕಾಗಿ ತಮಗೂ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಏಕೆಂದರೆ ತಾವೇ ಕೊಡಿಸಿದಂತಹ ವಸತಿ ಶಾಲೆ ಅದು ನಾನು ಕೇಳತಕ್ಕದ್ದು ಸೆಂಟ್ರಲ್ ಸೆಕ್ಟಾರ್‌ನಲ್ಲಿ ಸ್ಟೇಟ್ ಸೆಕ್ಟಾರ್‌ನಲ್ಲಿ ನೀವು ಕ್ರಿಯಾ ಯೋಜನೆಯನ್ನು ಮಾಡುವಾಗ ಅಲ್ಲಿ ಇದ್ದಂತಹ ಜನಸಂಖ್ಯೆಯನ್ನು ಹಾಗೂ ಈಗ ಇರುವಂತಹ ಜನಸಂಖ್ಯೆಯನ್ನು ಅಳೆಯಿರಿ ಎಂಬ ಮಾತು ಹೇಳುತ್ತೇನೆ. ಅದನ್ನು ಬಿಟ್ಟು ಬಾಗೇವಾಡಿ ಕ್ಷೇತ್ರ, ಹುಕ್ಕೇರಿ ಕ್ಷೇತ್ರದೊಳಗೂ, ಹೊರ ಭಾಗದ ಕ್ಷೇತ್ರದಲ್ಲೂ ಜನ ಹೆಚ್ಚಿಗೆ ಇದ್ದಾರೆ. ಅಲ್ಲೂ ಬಹಳ ಕಡಿಮೆ ಕೊಡುತ್ತಿದ್ದಾರೆ ಎನ್ನುವ ಮಾತು ಇದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ಜನಸಂಖ್ಯೆ ಆಧಾರದ ಮೇಲೆ ಯೋಜನೆಯನ್ನು ಉಪ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಾರಿ ಮಾಡುತ್ತಾರೆ. ಆ ಜಿಲ್ಲಾ ಮಟ್ಟದಲ್ಲಿ ಯೋಜನೆ ತಯಾರು ಮಾಡಿದರೆ ಹೆಚ್ಚಿಗೆ ಹಣವನ್ನು ಕೊಡಲು ಸಿದ್ಧರಿದ್ದೇವೆ.

ಶ್ರೀ ಚಂದ್ರಶೇಖರ್ ನಾಯಕ್ :— ಜಿಲ್ಲಾ ಯೋಜನೆಯಲ್ಲಿ ಮಾಡುವಾಗ ನೀವು ಡೈರೆಕ್ಷನ್ ಕೊಡಿ. ಇಲ್ಲಿ ಜನಸಂಖ್ಯೆ ಹೆಚ್ಚಿಗೆ ಇದೆ. ಈಗ ಇದ್ದಂತಹ ಜನಸಂಖ್ಯೆಯನ್ನು ಅಳೆಯಿರಿ, ಎನ್ನುವ ಬಗ್ಗೆ ನೀವು ಡೈರೆಕ್ಷನ್ ಕೊಡುವುದಾದರೆ ಆ ರೀತಿ ಅವರು ಗ್ರಾಜುಯಲ್‌ಆಗಿ ಮಾಡಿ ಕಳಿಸುತ್ತಾರೆ. ನೀವು 1991ರಲ್ಲಿ ಇದ್ದಂತಹ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಅವರು ಮಾಡುತ್ತಾರೆ, ನೀವು ಅದಕ್ಕೆ ಅನುಮತಿ ಕೊಡುತ್ತೀರಿ. ಅದಕ್ಕೆ ಅವರಿಗೆ ಡೈರೆಕ್ಷನ್ ಹೋಗಬೇಕು.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ಜನಸಂಖ್ಯೆ ಆಧಾರದ ಮೇಲೆ ಮಾಡಲು ಒಂದು ಸೂಕ್ತವಾದ ಆದೇಶವನ್ನು ಕೊಡುತ್ತೇನೆ.

ಶ್ರೀ ಚಂದ್ರಶೇಖರ್ ನಾಯಕ್ :— ಈಗ ಜನಸಂಖ್ಯೆ ಎಷ್ಟು ಇದೆ ಎಂದು ಸರ್ವೆ ಮಾಡಿ. ಇಡೀ ಬೆಳಗಾವಿ ಜಿಲ್ಲೆಯೊಳಗೆ ನಾಯಕ್ ಸಮಾಜದ ಜನಸಂಖ್ಯೆ ಹೆಚ್ಚು ಇದೆ ಎನ್ನುವಾಗ ಅಲ್ಲಿ ಕೊಡುವಂತಹ ವ್ಯವಸ್ಥೆ ಕ್ರಿಯಾ ಯೋಜನೆ ಮಾಡುವಾಗ ಅವರಿಗೆ ಆದೇಶ ಕೊಡಬೇಕು. ಹೆಚ್ಚು ಗಿರಿಜನ ಉಪಯೋಜನೆ ಅಲ್ಲಿ ಒದಗಿಸಿರಿ ಎನ್ನುವ ಮಾತಿಗೆ ತಾವು ಹೆಚ್ಚಿಗೆ ಒತ್ತು ಕೊಡಬೇಕು. ಎನ್ನುವ ಮಾತನ್ನು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ಆಗಬಹುದು.